(ಶ್ರೀ ಎಚ್. ಸಿದ್ಧವೀರಪ್ಪ)

ಬೇಕೆಂದು, ಇವರಾಗಲೇ ಅಲ್ಲಿ ಕೆಲಸಮಾಡಲು ಪ್ರಾರಂಭಿಸಿ ಮೂರು ವರ್ಷಗಳಾಗಿರುತ್ತವೆಂದೂ ಮತ್ತು ಅವರನ್ನು ಬೇರೆ ಕಡೆಗೇನಾದರೂ ವರ್ಗ ಮಾಡುತ್ತೀರಾ, ಹೇಗೆ ಎಂತಲೂ ಕೇಳಿದ್ದಾರೆ. ಆದರೆ ಆ ಪ್ರೊವಿಸ್ಸೂ ಪೆಂಡಿಂಗ್‌ನಲ್ಲಿದೆ. ಅದು ತೀರ್ಮಾನವಾದಮೇಲೆ, ಅವರನ್ನು ರಿಪರ್ಟ್ ಮಾಡದೆ ಹಾಗೆಯೇ O.O.D. ಆಗಿ ರೋಡ್ ಟ್ರಾನ್ಸ್‌ಪೋರ್ಟು ಇಲಾಖೆಯಲ್ಲಿ ಇಡುವಂತೆ ಆದರೆ ಆಗ ಈ ವೇಕೆನ್ಸಿಯನ್ನು ಭರ್ತಿ ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ಮುಂದೆ ಅಪ್ಲಿಕೆಂಟ್ಸ್‌ಗಳ ಇಂಟರ್‌ವ್ಯೂ ಪ್ರಶ್ನೆ ಬಂದಾಗ, ಆ ಸಂದರ್ಭದಲ್ಲಿ ಬೇರೆ ಕಡೆಯಿಂದ ಒತ್ತಾಯ ಬಂದುದರಿಂದ ಆ ಅರ್ಜಿದಾರರಿಗೆ ಆ ಕೆಲಸ ಕೊಡುವುದನ್ನೇನಾದರೂ ನಿಲ್ಲಿಸಲಾಯಿತೇ ?

ಶ್ರೀ ಎಚ್. ಸಿದ್ಧವೀರಪ್ಪ.—ಇಲ್ಲ. ಅದು ಸರಿಯಲ್ಲ. ಆ ರೀತಿ ಮಾಡಲಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಆ ಅರ್ಜಿಗಳನ್ನು ಕರೆದದ್ದು ಯಾವಾಗ ?

Sri H. SIDDAVEERAPPA.—They were advertised by the Public Service Commission in the *Mysore Gazette* in the month of December 1952.

ಡಿಸೆಂಬರ್ 1952ರಲ್ಲಿ ಅಡ್ವರ್‌ಟೈಜ್ ಆಗಿದೆ. ಅದು ಆದಮೇಲೆ 1952ನೆಯ ಏಪ್ರಿಲ್ 7ನೆಯ ತಾರೀಖು ಅವರುಗಳ ಇಂಟರ್‌ವ್ಯೂ ಆಗಬೇಕಾಗಿತ್ತು.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಆ ಟ್ರಾನ್ಸ್‌ಪೋರ್ಟು ಇಲಾಖೆಯಲ್ಲಿ O.O.D ಯಾಗಿ ಕೆಲಸಮಾಡುತ್ತಿರುವ ಇನ್‌ಸ್ಪೆಕ್ಟರ್ ಆಫ್ ಮೋಟಾರ್ ವೆಹಿಕಲ್ಸ್ ಅವರ ಹೆಸರನ್ನು ಹೇಳುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ಅವರ ಹೆಸರು ಶ್ರೀ ರಾಮಚಂದ್ರಪ್ಪ ಎಂದು.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ತಾವು ತಿಳಿಸಿದವರು ಆ ಟ್ರಾನ್ಸ್‌ಪೋರ್ಟು ಇಲಾಖೆಯಲ್ಲಿ O.O.D.ಯಾಗಿ ಕೆಲಸ ಮಾಡುತ್ತಿಲ್ಲ. ಆ ರೋಡ್ ಟ್ರಾನ್ಸ್‌ಪೋರ್ಟು ಇಲಾಖೆ ತೆರೆದಾಗಿನಿಂದಲೂ ಅವರನ್ನು ಖಾಯಂ ಆಗಿ ಅಲ್ಲೇ ನೇಮಿಸಲಾಗಿರುತ್ತದೆಂಬುದು ನಿಜವೇ ?

ಶ್ರೀ ಎಚ್. ಸಿದ್ಧವೀರಪ್ಪ.—ಇಲ್ಲ. ಆ ಇಲಾಖೆಯಲ್ಲಿ ಖಾಯಂ Inspector of Motor Vehicles ಇಲ್ಲದೆ ಇರುವುದರಿಂದ ಇವರನ್ನು ಅಲ್ಲಿಗೆ ಹಂಗಾಮಿಯಾಗಿ ವರ್ಗಮಾಡಲಾಗಿದೆ. ಅಲ್ಲಿ ಅವರಿಗೆ ಆ ಪೋಸ್ಟ್ ಇನ್ನೂ ಪರ್ಮನೆಂಟ್ ಆಗಿಲ್ಲ. ಅದು ಆಫೀಸರಾಗಿ ತೀರ್ಮಾನವಾಗುವುದಕ್ಕೆ ಮುಂಚೆ ಹೀಗೆ ಅರ್ಜಿಗಳನ್ನು ಕರೆಯಲಾಗಿದೆ. 1952ನೆಯ ಜೂಲೈ 9ರಲ್ಲಿ ಚಿತ್ರದುರ್ಗ ಜಿಲ್ಲೆಗೆ ಈ ಹುದ್ದೆ ಹೊಸದಾಗಿ ಏರ್ಪಾಡಾಯಿತು. ಆ ಜಾಗವನ್ನು ಭರ್ತಿಮಾಡುವುದಕ್ಕಾಗಿ ಈ ಅರ್ಜಿಗಳನ್ನು ಕರೆಯಲಾಯಿತು. ಈಗ ಅವರು ಕೆಲಸಮಾಡುತ್ತಿರುವ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಅವರ ಸ್ಥಾನ ಖಾಯಂ ಆಗದೆ ಇದ್ದರೆ, ಈ ಹೊಸ ಹುದ್ದೆಯನ್ನು ನಿರ್ಮಾಣ ಮಾಡಿದ್ದರಿಂದ ಒಂದು ಸ್ಥಾನ ಸೂಪರ್‌ಫ್ಲುಯಸ್ ಆಗುತ್ತದೆ. ಆ ಹುದ್ದೆಯ ಬಗ್ಗೆ ಇನ್ನೂ ಸರ್ಕಾರಿ ಹುಕುಂ ಆಗಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಅವರನ್ನು ಆ ಇಲಾಖೆಗೆ ಅಲ್ಲಿ O. O. D.ಯಾಗಿ ಕೆಲಸಮಾಡಲು ಎಷ್ಟು ದಿವಸಗಳ ಹಿಂದೆ ನೇಮಿಸಲಾಯಿತು ?

ಶ್ರೀ ಎಚ್. ಸಿದ್ಧವೀರಪ್ಪ.—ನೋಟೀಸ್.

ಶ್ರೀ ಕೆ. ಪುಟ್ಟಸ್ವಾಮಿ.—ಅವರು ಆ ಡಿಪಾರ್ಟ್‌ಮೆಂಟ್ ಹುಟ್ಟಿದಾಗಿನಿಂದಲೂ ಅಲ್ಲೇ ಕೆಲಸಮಾಡುತ್ತಿದ್ದಾರೆಂಬುದು ತಮಗೆ ಗೊತ್ತೇ ?

ಶ್ರೀ ಎಚ್. ಸಿದ್ಧವೀರಪ್ಪ.—As I have already stated ಅವರು ಅಲ್ಲೆ ಎಷ್ಟು ದಿವಸಗಳಿಂದ ಕೆಲಸ ಮಾಡುತ್ತಿದ್ದಾರೆಂಬ ಬಗ್ಗೆ ಖಚಿತವಾದ ತಾರೀಖು ಗೊತ್ತಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—1952ನೆಯ ಇಸವಿಯಲ್ಲಿ ತಾವು ಚಿತ್ರದುರ್ಗಕ್ಕೆ ಒಂದು ಹೊಸದಾಗಿ ಈ ಹುದ್ದೆಯನ್ನು ಆರ್ಡರ್ ಮಾಡದೆ ಇದ್ದು, ಈಗ ಆ ಇಲಾಖೆಯಲ್ಲಿ ಕೆಲಸಮಾಡುತ್ತಿರುವವರೂ ಸಹ ಈ ಇನ್‌ಸ್ಪೆಕ್ಟರ ಹುದ್ದೆಗೆ ರಿಮರ್ಟ್ ಆಗಿದ್ದಲ್ಲಿ ಆಗ ಒಂದು ವೇಕೆನ್ಸಿ ರಿಕ್ರೈಂಟ್ ಆಗಬೇಕಾಗಿತ್ತಲ್ಲವೇ ?

ಶ್ರೀ ಎಚ್. ಸಿದ್ಧವೀರಪ್ಪ.—ಏನಾಗಬಹುದಿತ್ತೋ I cannot say.

ಶ್ರೀ ಬಿ. ರಾಚಯ್ಯ.—ಯಾರನ್ನಾದರೂ ತಾವು ದೃಷ್ಟಿಯಲ್ಲಿ ಇಟ್ಟುಕೊಂಡು ಈ ಹುದ್ದೆಯನ್ನು ನಿರ್ಮಿಸಲಾಯಿತೇ ?

ಶ್ರೀ ಎಚ್. ಸಿದ್ಧವೀರಪ್ಪ.—ಹಾಗೆ ಯಾರೂ ಸರ್ಕಾರದವರ ದೃಷ್ಟಿಯಲ್ಲಿ ಇರಲಿಲ್ಲ.

ಶ್ರೀ ಬಿ. ರಾಚಯ್ಯ.—ಅವರ ಹುದ್ದೆ ಬೇರೆ ಕಡೆ ಖಾಯಂ ಆಗದೆ ಇರುವಾಗ, ಮುಂಚಿತವಾಗಿಯೇ ಆ ಹುದ್ದೆಗೆ ಅಡ್ವರ್‌ಟೈಜ್‌ಮಾಡಲು ಕಾರಣವೇನು ?

ಶ್ರೀ ಎಚ್. ಸಿದ್ಧವೀರಪ್ಪ.—ಆ ಹುದ್ದೆಗೆ ಅವಶ್ಯಕತೆಯಿದೆ ಎಂದು ಸರ್ಕಾರದವರಿಗೆ ಕಂಡುಬಂದಮೇಲೆ ಸರ್ಕಾರದವರು 1952ನೆಯ ಜೂಲೈ 9ನೆಯ ತಾರೀಖಿನಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಮೂಲಕ ಅಡ್ವರ್‌ಟೈಜ್ ಮಾಡಿಸಲಾಯಿತು. ಈಗ ಶ್ರೀ ರಾಮಚಂದ್ರಪ್ಪ ಅವರು ಕೆಲಸ ಮಾಡುತ್ತಿರುವ ಹುದ್ದೆಯಲ್ಲಿ ಅವರಿಗೆ ಇನ್ನೂ ಖಾಯಂ ಆಗದೆ ಇರುವಾಗ ಅದನ್ನು ಹಾಗೆಯೇ ಬಿಟ್ಟುಕೊಂಡು ಆ ಒಂದು ಸ್ಥಾನದಲ್ಲಿ ಹೇಗೆ ಇಬ್ಬರನ್ನು ನೇಮಕಮಾಡಲು ಸಾಧ್ಯವಾಗುತ್ತದೆ ?

Absorption of workers of Oorgaum Mines by starting new factories.

Q.—35. Sri P. M. SWAMIDURAI (Kolar Gold Fields—Scheduled Castes).—

Will the Government be pleased to state :—

(*a*) if any representations have been received from Kolar Gold Fields for starting a Textile Mill or Machine Tool Factory to meet the situation arising out of the proposed closure of

Oorgaum Mines and the consequent unemployment;

(*b*) what steps the Government propose to take in regard to the above?

A.—Sri H. SIDDAVEERAPPA (Minister for Home and Industries).—

(*a*) Yes; for starting an Industrial Workshop or a Factory.

(*b*) In the present financial position, it is not possible for Government to start any Factory which would be able to absorb such a large number of people. Government will, however, be glad to afford such facilities as may be recommended by the Industries Board for establishing any such industry in the private sector.

Sri P. M. SWAMIDURAI.—What are the other measures that the Government will take to solve unemployment among these workers?

*Sri H. SIDDAVEERAPPA.—I request that the question may be repeated.

Sri P. M. SWAMIDURAI.—What are the other measures that the Government will take to solve the unemployment problem of these workers?

Sri H. SIDDAVEERAPPA.—Sir, I may submit there is no question of unemployment among these workers. Very recently, just a week back, a deputation from K. G. F. Sanitary Board met me and there the representatives of Messrs. John Taylor & Sons were also present. I was given to understand that the Mines are prepared to engage or give labour to all those that have now been thrown out from service on account of the closure of the Oorgaum Mines. But the question appears to be that the men themselves are desirous of being paid off rather than getting permanent service there. Therefore, actually the question of unemployment on account of the closure of Oorgaum Mines does not arise at all because Messrs. John Taylor & Sons are prepared to engage all those that are fit who have now bent sent out of Oorgaum Mines.

Sri P. M. SWAMIDURAI.—Has it come to the notice of Government that it is very difficult to find jobs for surface workers in the K. G. F. and the management themselves are finding it difficult to provide work for these workers?

Sri H. SIDDAVEERAPPA.—As I have already submitted, the Management are prepared to give labour to all those that have now been thrown out on account of the closure of Oorgaum mines and I may also add that, keeping this in mind, I wrote to the Government of India whether they could locate at K. G. F. their wireless products factory which they propose to locate at Jalahalli. I requested them and gave them all the facilities that could be given, but they are of the opinion that it can be more profitable to locate the Factory at Jalahalli, because they have certain advantages there according to them.

Sri P. M. SWAMIDURAI.—My question is this. Now the Management themselves are finding it very hard to provide work for surface workers!

Sri H. SIDDAVEERAPPA.—The Management have said that they are prepared to give work to all those, whether on the surface or under the mines, and the Management also have come forward to open another factory there.

Sri K. S. VASAN.—Will the Government assure that Messrs. John Taylor & Sons will provide work for all those willing to work?

Sri H. SIDDAVEERAPPA.—That is what I am given to understand. It is on record.

Sri K. S. VASAN.—Have not the Central Government suggested to our State Government that some other factory may be located in or near about K. G. F.?

Sri H. SIDDAVEERAPPA.—Yes. The Madhava Rao Committee has made some recommendation.

Sri R. K. PRASAD.—Have you got any powers to force the Management to do anything against their will?

Sri H. SIDDAVEERAPPA.—I can only request them.

ಶ್ರೀ ಎಸ್. ಗೋಪಾಲಗೌಡ.—ಇಲ್ಲಿ ಇಂಡಸ್ಟ್ರಿಯಲ್ ಬೋರ್ಡಿನವರು ಶಿಫಾರಸು ಏನಾದರೂ ಮಾಡಿದರೆ ಯಾವುದಾದರೂ ಕೈಗಾರಿಕೆಯನ್ನು ಅಲ್ಲಿ ಸ್ಥಾಪಿಸಲಿಕ್ಕೆ ಸಹಾಯಮಾಡುತ್ತೇವೆಂದು ಹೇಳಿದ್ದೀರಿ. ಆ ಪ್ರಕಾರ ಇಂಡಸ್ಟ್ರಿಯಲ್ ಬೋರ್ಡಿನವರೇನಾದರೂ ಈ ಬಗ್ಗೆ ಶಿಫಾರಸುಗಳನ್ನು ಯಾವುದಾದರೂ ಮಾಡಿದ್ದಾರೆಯೇ?

Sri H. SIDDAVEERAPPA.—It is under consideration of Government.

Withdrawal of prohibitory order against public meetings in K. G. F.

Q.—36. Sri P. M. SWAMIDURAI (Kolar Gold Fields—Scheduled Castes).—

Will the Government be pleased to state:—

(*a*) since how long the prohibitory order against public meetings, etc., is in force in Kolar Gold Fields;

(*b*) whether they are aware of the representations to the Government to withdraw the prohibitory order;

(*c*) for how long the prohibitory order in Kolar Gold Fields will continue?

A.—Sri H. SIDDAVEERAPPA (Minister for Home and Industries).—

(*a*) It is in force in Kolar Gold Fields from 7th September 1952.

(*b*) No representations have been made to Government in the matter.

(*c*) It will continue till such time as there is need for it in the interest of public security.

Sri P. M. SWAMIDURAI.—I have no supplementaries to put.

Sri K. S. VASAN.—Under what Section or under what Act this prohibitory order is in force?

*Sri H. SIDDAVEERAPPA.—Under Section 45 of the Police Act.

Sri K. S. VASAN.—Is not the Indian Police Act in force in the Mysore State?

Sri H. SIDDAVEERAPPA.—It is not in conflict with the present Act.

Sri K. S. VASAN.—If there is a provision for relief in the holding of public meetings even in the Indian Act, why was it not used under the Mysore Police Act in the K. G. F.?

Sri H. SIDDAVEERAPPA.—The Government feel that the Mysore Police Act serves their purpose.

Sri K. S. VASAN.—What are the reports to the Government on the basis of which it is said that there is need for securing public security by imposing prohibitory order in the K. G. F.?

Sri H. SIDDAVEERAPPA.—The report from the District Magistrate from time to time.

ಶ್ರೀ ಮುಲ್ಕ ಗೋವಿಂದರೆಡ್ಡಿ.—(ಬ) ಪ್ರಶ್ನೆಗೆ ಉತ್ತರವಾಗಿ ಯಾವ ತರಹದ ಮನವಿಯೂ ಬಂದಿಲ್ಲವೆಂದು ಹೇಳಿದ್ದೀರಿ. ಇನ್ನೇ ಅಸೆಂಬ್ಲಿಯಲ್ಲಿ ಮಾನ್ಯ ಸದಸ್ಯರು ಈ ರೀತಿಯಾಗಿ ಮಾಡಿದ್ದು ತಪ್ಪು ಎಂದು ಸರ್ಕಾರದವರ ಗಮನಕ್ಕೆ ತಂದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಪ್ರಶ್ನೆಯಲ್ಲಿ 'Public representations' ಎಂದು ಹೇಳಿದೆ. ಅಂಥವು ಬಂದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಸೆಂಬ್ಲಿಯ ಸದಸ್ಯರುಗಳು ಹೇಳಿದರೆ ಅದು 'Public representation' ಅಲ್ಲವೆ?

Sri H. SIDDAVEERAPPA.—You stand in a higher position.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅದಕ್ಕಾಗಿಯೇ ನಾವು ಹೇಳಿದ್ದನ್ನು ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ನೀವು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡೇ ಮಾಡಿದ್ದೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಹೀಗೆ 9 ತಿಂಗಳ ಕಾಲವಾದರೂ ಇನ್ನೂ ತೆಗೆಯದಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—Necessity ಇದೆ. Causes ಇಲ್ಲದೆ ಇದ್ದರೆ ತಕ್ಷಣವೇ ತೆಗೆದುಬಿಡುತ್ತಿದ್ದೆವು.

ಶ್ರೀ ಎಸ್. ಗೋಪಾಲಗೌಡ.—ಇನ್ನೂ ಎಷ್ಟು ಕಾಲ ಈ ನಿಷೇಧಾಜ್ಞೆ ಅಲ್ಲಿ ವಿಂದುವರಿಯುತ್ತದೆ?

Mr. SPEAKER.—There is answer in (*c*).